ಶ್ರೀ ಎಂ. ಸಿದ್ದಮಾದಯ್ಯ.—ಸ್ವಾಮಿ, ಮಾರಾಟ ಮಾಡುವವರಿಗೆ ಈಗ ೫ ರೂಪಾಯಿ ಏನು ಶುಲ್ಕ ಇದೆಯೋ ಅದನ್ನು ೩ ರೂಪಾಯಿಗೆ ಇಳಿಸುವಂತೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ.—ನಾನು ಮೊದಲೇ ಹೇಳಿದ ಹಾಗೆ ಇದು ಮಾರಾಟ ಮಾಡುವವರಿಗೆ ಮಾತ್ರ ೫ ರೂಪಾಯಿ ಇದೆ. ಮನೆ ಉಪಯೋಗಕ್ಕೆ ಆದರೆ ೨–೫೦ ರೂಪಾಯಿಯೇ ಇದೆ.

ಶ್ರೀ ಎಂ. ಸಿದ್ದಮಾದಯ್ಯ.—ಈಗ ಇದಕ್ಕೆ ಪರ್ಮಿಟ್ ಕೊಡಬೇಕಾದರೆ ಸಂಬಂಧಪಟ್ಟ ಅಧಿಕಾರಿಗಳು ಯಾರು? ಡಿಸ್ಟ್ರಿಕ್ಟ್ ಆಫೀಸರ ಕೊಡುತ್ತಾರೆಯೇ ಅಥವಾ ರೇಂಜ ಆಫೀಸರ್ ಕೊಡುತ್ತಾರೆಯೇ ? ಇದು ಎಲ್ಲಾ ಕಡೆಗೂ ಅನ್ವಯಿಸುತ್ತದೆಯೇ ?

ಶ್ರೀ ಕೆ. ಎಚ್. ಪಾಟೀಲ.—ಇದನ್ನು ಫಾರೆಸ್ಟ್‌ಗೆ ಸಂಬಂಧಪಟ್ಟ ಅಧಿಕಾರಿಗಳು ಕೊಡುತ್ತಾರೆ. ಈಗ ಮಾನ್ಯ ಸದಸ್ಯರು ೨–೫೦ ರೂಪಾಯಿ ಸುಂಕವನ್ನು ಎಲ್ಲಾ ಕಡೆಗೂ ಅನ್ವಯಿಸುತ್ತದೆಯೇ ಎಂದು ಕೇಳಿದರು. ಇದು ಮಲೆನಾಡು ಪ್ರದೇಶದಲ್ಲಿ ಮತ್ತು ಇನ್ನು ಎಲ್ಲೆಲ್ಲಿ ಈ ಪ್ರಿವಿಲೇಜಸ್ ಇದೆಯೋ ಅಲ್ಲೆಲ್ಲಾ ಅನ್ವಯಿಸುತ್ತದೆ. ಮಾನ್ಯ ಸದಸ್ಯರು ಇದು ಎಲ್ಲಾ ಕಡೆಗೂ ಕೊಡಬೇಕು ಎಂದು ಪರಿಗಣಿಸಬೇಕೆಂದರೆ ಆ ನಿರ್ಣಯವನ್ನು ತೆಗೆದುಕೊಳ್ಳೋಣ.

STARRED QUESTIONS AND ANSWERS

IMPROVEMENT OF SOUTH-EASTERN PART OF BANGALORE CITY

142. Sri K. R. SRINIVASULU NAYUDU (Shanthinagar).—Will the Minister for Municipal Administration be pleased to state :—

(a) the works undertaken to improve the South–Eastern part of the City of Bangalore ;

(b) the stage of the works for erecting a welcome arch near the Airport and putting a garden near Domlur ?

Sri B. BASAVALINGAPPA (Minister for Municipal Administration).—

(a) *Vide* Statement appended

(b) The matter is being examined by the Bangalore Corporation.

STATEMENT

Showing the works sanctioned pertaining to South Range

Sl. No.	Dn. No.	No.of works sanctioned	Amount Rs.	Remarks
1	28	26	2,50,000	Major works carried out of asphalting to roads and drains and cement concreting to Circle, etc.
2	29	22	1,55,870	Do
3	30	38	1,67,950	Formation and improvements of roads and drains.
4	31	44	2,20,000	Major works of construction of open air theatre and asphalting roads and construction of drains, etc.
5	32	21	1,00,000	Major works of constrution of open air theatre and asphalting to existing and improvements of roads and drains.
6	33	33	1,68,000	Widening of roads and asphalting and concreting the road and other works.
7	34	42	1,98,800	Forming metalling and chip carpetting to roads in Jayanagar.
8	35	70	4,00,000	Major works of asphalting to metal surface and certain drains, etc.
9	36	80	3,85,000	Constructing of High School and Nursery Schools chipcarpetting to roads and formation of roads in Lakksandra village and construction of masonry drains etc.
10	37	34	2,60,000	Cement concreting to roads lanes in Mavally & widening the roads, drainworks, etc.

DIVISION No. 43

Sl. No.	Dn. No.	Communication	Storm water drain	Public Health, Parks and Gardens and Markets	Water supply
45		1,83,000-00	50,000-00		9,000-00

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು.—ಸ್ವಾಮಿ, ಈ ಪ್ರಶ್ನೆಯಲ್ಲಿ ಕೊಟ್ಟಿರುವ ಉತ್ತರ ನೋಡಿದರೆ ಇದು ಮಾಮೂಲಾಗಿ ಕೊಡತಕ್ಕಂಥ ಉತ್ತರ. ಈಗ ಈ ಡ್ರೈನೇಜ ಬಗ್ಗೆ ಏನು ಹೇಳಿದರೋ ಅದನ್ನು ನೋಡಿದರೆ ನನ್ನ ಅನುಭವ ದಲ್ಲಿ ಇರುವುದನ್ನೇ ಹೇಳಿದ್ದೀರಿ. ನನ್ನ ಕ್ಷೇತ್ರ ಶಾಂತಿನಗರ ಅದು ಸೊಳ್ಳೇಪುರ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ಈ ವಿಷಯವು ಬೆಂಗಳೂರು ನಗರ ಸಭೆಯವರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ, ಈವೊತ್ತಿನ ವರೆಗೂ ಅವರು ಯಾವ ಕೆಲಸವನ್ನೂ ಮಾಡಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ? ಮತ್ತು ನೀಲಸಂದ್ರದಿಂದ ಸ್ಲಾಟರ ಹೌಸಗೆ ಬರುವ ಒಂದು ಓಪನ್ ಡ್ರೈನ ಹಾಗೆಯೇ ಇದೆ, ಈಗ ಮಳೆ ಶುರುವಾಗಿದೆ, ಅಲ್ಲಿ ಮಳೆ ನೀರು ಬಂದು ತುಂಬಿ ಬಿಟ್ಟರೆ ಅಲ್ಲಿಗೆ ಹೋಗಿ ಬರುವುದಕ್ಕೂ ಆಗುವುದಿಲ್ಲ. ನೀವು ಈ ಕೆಲಸವನ್ನು ಯಾವಾಗ ತೆಗೆದುಕೊಳ್ಳುತ್ತೀರಾ ಎನ್ನುವುದನ್ನು ತಿಳಿಸುತ್ತೀರಾ ?

†ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಷಯ ಗಳೂ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಏನೇನು ಕೆಲಸಗಳನ್ನು ತೆಗೆದುಕೊಳ್ಳ ಬೇಕೋ ಅದನ್ನು ಈಗಾಗಲೇ ತೆಗೆದುಕೊಂಡಿದ್ದಾರೆ. ಅವರು ಎಲ್ಲಾ ಸೊಳ್ಳೇ ವಿಚಾರದಲ್ಲಿ ಹೇಳಿದ್ದಾರೆ. ಈ ಸೊಳ್ಳೆಯನ್ನು ನಿರ್ಮೂಲನ ಮಾಡುವುದಕ್ಕೋಸ್ಕರ ಕೋರಮಂಗಲ, ಬಾಚಹಳ್ಳ ಪ್ರದೇಶಗಳಲ್ಲಿ ಸೂಯರೇಜ ಟ್ರೀಟಮೆಂಟ ಪ್ಲಾಂಟ್ ಹಾಕುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಅವರು ಆ ಬಗ್ಗೆ ೯೮ ಲಕ್ಷ ರೂಪಾಯಿಗಳ ಕೆಲಸವನ್ನು ತೆಗೆದುಕೊಂಡಿದ್ದಾರೆ. ಈಗ ಸುಮಾರು ಅರ್ಧ ಭಾಗ ಕೆಲಸ ಪೂರ್ತಿ ಯಾಗಿದೆ. ಇನ್ನು ಸುಮಾರು ಒಂದೂವರೆ ಅಥವಾ ಎರಡು ತಿಂಗಳೊಳಗೆ ಬಾಕಿ ಕೆಲಸ ಮುಗಿಯುತ್ತದೆ. ಆವಾಗ ಸೊಳ್ಳೆ ಕಡಿಯುವದು ಕಡಿಮೆ ಆದೀತು ಎನ್ನು ವುದು ನನ್ನ ಆಸೆಯಾಗಿದೆ. ಇನ್ನು ಬೇರೆ ಬಡಾವಣೆಗಳಲ್ಲೂ ಸಹ ಕೋರಮಂಗಲ, ತಾವರಕೆರೆ, ಮಡಿವಾಳ, ಬೈರಸಂದ್ರ ಈ ಪ್ರದೇಶಗಳಲ್ಲಿ ಟ್ರಸ್ಟ ಬೋರ್ಡಿನವರು ಜಮೀನಗಳನ್ನು ಅಕ್ವೈರ್ ಮಾಡಿಕೊಂಡು ಅಲ್ಲಲ್ಲಿ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅಲ್ಲಿ ವಾಟರ ಸೂಯರೇಜ ಬೋರ್ಡಿನವರು ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದಾರೆ. ಈ ಬಗ್ಗೆ ಇನ್ನೂ ಪ್ರೋಗ್ರೆಸ ಇಲ್ಲ ಎಂದು ಹೇಳುವುದಾದರೆ ಮಾನ್ಯ ಸದಸ್ಯರು ನನ್ನ ಛೇಂಬರಗೆ ಬಂದರೆ ಎಲ್ಲಾ ವಿಷಯಗಳನ್ನೂ ಹೇಳುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಡು —ಈಗ ಕೋರಮಂಗಲ ಲೇಔಟ್ ಬಗ್ಗೆ ನೀವು ಉತ್ತರ ಹೇಳಿರುವುದು ನೋಡಿದರೆ ಮಾಮೂಲದ ಉತ್ತರವನ್ನೇ ಹೇಳಿದ್ದೀರಿ. ಅಲ್ಲಿ ಜನಗಳು ಟ್ರಸ್ಟ್ ಬೋರ್ಡಿನಿಂದ ೨೦–೨೫ ಸಾವಿರ ರೂಪಾಯಿ ಕೊಟ್ಟು ಸೈಟುಗಳನ್ನು ತೆಗೆದುಕೊಂಡು ಎರಡು ವರ್ಷವಾಗಿದೆ. ಆ ಲೇಔಟ್‌ನಲ್ಲಿ ಚರಂಡಿ ವ್ಯವಸ್ಥೆ, ನೀರಿನ ವ್ಯವಸ್ಥೆ, ಲೈಟ ವ್ಯವಸ್ಥೆ ಏನೂ ಆಗಿಲ್ಲ. ಎಲ್ಲಾ ಬರೀ ಪ್ಲಾನ ಪೇಪರಿನಲ್ಲಿ ಇದೆಯೇ ಹೊರತು ಕೆಲಸ ಮಾಡುತ್ತಾ ಇಲ್ಲ. ನಮ್ಮ ಕ್ಷೇತ್ರದಲ್ಲಿ ೧೦೦ಕ್ಕೆ ೮೦ ಜನ ಎಲ್ಲಾ ಬಡವರೇ ಇದ್ದಾರೆ. ಅಲ್ಲಿ ಒಂದು ಕಾರ್ಪೊರೇಷನ್ ಹೈಸ್ಕೂಲ ಕೇಳಿದರೆ ವಿದ್ಯಾಭ್ಯಾಸದ ಇಲಾಖೆಯವರು ನಮ್ಮಲ್ಲಿ ಹಣ ಇಲ್ಲ ಎಂದು ಹೇಳುತ್ತಾರೆ. ಇದು ತಮ್ಮ ಗಮನಕ್ಕೆ ಬಂದಿದೆಯೇ? ಅಲ್ಲಿ ಒಂದು ಕಾರ್ಪೊರೇಷನ್ ಹೈಸ್ಕೂಲ ಕೊಟ್ಟು ಅಲ್ಲಿಯ ಜನರಿಗೆ ಉಪಕಾರ ಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಕೆಲವು ಬಡಾವಣೆಗಳಲ್ಲಿ ಕಾಲೇಜುಗಳನ್ನು ಸ್ಥಾಪಿಸಲಿಕ್ಕೆ ಸರ್ಕಾರದವರು ಒಂದು ಹೊಸ ನೀತಿಯನ್ನು ಮಾಡಿದ್ದಾರೆ. ಅದರ ಪ್ರಕಾರ ಪ್ರೈಮರಿ ಸ್ಕೂಲ, ನರ್ಸರಿ ಸ್ಕೂಲಿಗೆ ನಾವು ಕಟ್ಟಡವನ್ನು ಕಟ್ಟಿಸಿ ಕೊಡುತ್ತೇವೆ. ಅದರೆ ಅದರ ಎಲ್ಲಾ ವ್ಯವಸ್ಥೆಯನ್ನು ಕೂಡ ಅಂದರೆ ಅದನ್ನು ನಡೆಸಿಕೊಂಡು ಹೋಗತಕ್ಕಂಥಾ ವ್ಯವಸ್ಥೆಯನ್ನು ನಾವು ವಿದ್ಯಾ ಇಲಾಖೆಯರಿಗೆ ವಹಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಅದರ ಪ್ರಕಾರ ಎಲ್ಲಾ ಲೇಔಟ್‌ಗಳಲ್ಲಿ ಸಾರ್ವಜನಿಕ ಸಂಸ್ಥೆಗಳಿಗೆ ಕಟ್ಟಡ ಕೆಟ್ಟಿಸಿಕೊಟ್ಟು ಅದನ್ನು ನಡೆಸಿಕೊಂಡು ಹೋಗುವುದು ಅವರ ಜವಾಬ್ದಾರಿ. ಆದರೆ ದಯವಾಡಿ ಮಾನ್ಯ ಸದಸ್ಯರು ಯಾವ ಪ್ರದೇಶದಲ್ಲಿ ಇಲ್ಲ ಎಂದು ಹೇಳಿದರೋ ಈವಾಗ ಅವರು ಅಲ್ಲಿ ಹೋಗಿ ನೋಡಿಕೊಂಡು ಬಂದರೆ ಒಳ್ಳೆಯದು. ಕೋರಮಂಗಲ ಬಡಾವಣೆಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ತೆಗೆದುಕೊಂಡಿದ್ದೇವೆ. ಅಲ್ಲಿ ಒಳಚರಂಡಿ ಕೆಲಸ ಪೂರ್ತಿಯಾಗುತ್ತಾ ಬಂದಿದೆ, ಮತ್ತು ಕುಡಿಯುವ ನೀರಿನ ವ್ಯವಸ್ಥೆ ಮಾಡಿದ್ದಾರೆ. ಟ್ರಸ್ಟ ಬೋರ್ಡಿನವರು ಎಲ್ಲೆಲ್ಲಿ ಬಡಾವಣೆ ಮಾಡಿದ್ದಾರೆ ಅಲ್ಲೆಲ್ಲಾ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಾ ಇದ್ದಾರೆ ಮತ್ತು ಮಾಡುತ್ತಾರೆ. ಮತ್ತು ವಾಟರ ಅಂಡ್ ಸೂಯರೇಜ್ ಬೋರ್ಡಿನವರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಮತ್ತು ಒಳಚರಂಡಿ ವ್ಯವಸ್ಥೆ ಮಾಡಲು ಅವರಿಗೆ ಹಣ ಕೊಟ್ಟಿದ್ದೇವೆ. ಅವರು ಹಗಲಿರುಳೂ ಕೆಲಸ ಮಾಡುತ್ತಿದ್ದಾರೆ. ದಯವಾಡಿ ಮಾನ್ಯ ಸದಸ್ಯರು ಒಮ್ಮೆ ಹೋಗಿ ಬಂದು ಹೇಳಬೇಕು ಎಂದು ಹೇಳುತ್ತೇನೆ. ಇಷ್ಟರವರೆಗು ಅವರು ಹೋಗಿ ನೋಡಿಲ್ಲ ಎಂದು ಕಾಣುತ್ತದೆ, ಆದುದರಿಂದ ದಯವಿಟ್ಟು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಶ್ರೀನಿವಾಸಲು ನಾಯ್ಡು ಅವರು ಒಂದು ಭಾಗದ ವಿಚಾರ ಹೇಳಿದ್ದಾರೆ. ಅದೇ ರೀತಿ ನಮ್ಮ ಭಾಗದಲ್ಲಿಯೂ ಇದೆ.

ಕಾರ್ಪೋರೇಷನ್ ಕೆಲಸ ಆಗುತ್ತಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಆಯಾ ಕ್ಷೇತ್ರದ ಕಾರ್ಪೋರೇಷನ್ ಸದಸ್ಯರು ಮತ್ತು ವಿಧಾನ ಸಭಾ ಸದಸ್ಯರನ್ನು ಕರೆಸಿ ಚರ್ಚೆ ಮಾಡಿ ಕಾರ್ಪೋರೇಷನ್ ಮತ್ತು ಟ್ರಸ್ಟಬೋರ್ಡ ಕೆಲಸದಲ್ಲಿ ಹೊಂದಾಣಿಕೆ ಇರುವ ಹಾಗೆ ವ್ಯವಸ್ಥೆಯನ್ನೇನಾದರೂ ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಅಭಿವೃದ್ಧಿ ಕಾರ್ಯಗಳು ಯಾವ ರೀತಿಯಾಗಿ ಮುಂದುವರಿದಿವೆ ಎನ್ನುವುದನ್ನು ಪರಿಶೀಲನೆ ಮಾಡುವುದಕ್ಕಾಗಿ ಎರಡು ಮೂರು ದಿವಸಗಳಿಂದ ಬೆಳಿಗ್ಗೆ ಸ್ಥಳ ಪರಿಶೀಲನೆ ಮಾಡಬೇಕು ಎಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇನೆ. ಮಾನ್ಯ ಸದಸ್ಯರಿಗೂ ಆಹ್ವಾನ ಕೊಡುತ್ತೇನೆ, ಅವರು ನನ್ನ ಜೊತೆಯಲ್ಲಿ ದಯವಾಡಿ ಬರಬೇಕು. ಸ್ಥಳ ಪರಿಶೀಲನೆ ಮಾಡಿ ಏನೇನಾಗಬೇಕೋ ಆ ಅಭಿವೃದ್ಧಿ ಕಾರ್ಯಗಳನ್ನು ಮಾಡೋಣ.

ಶ್ರೀ ಜಿ. ರಾಮೇಗೌಡ.—ಬೆಂಗಳೂರು ನಗರದಲ್ಲಿ ಕಸ, ಕಡ್ಡಿ, ಗೊಬ್ಬರ ಮತ್ತು ಕಚಡ ಏನಿದೆ ಅದನ್ನೆಲ್ಲ ಕಂಪೋಷ್ಟ ಮಾಡುವುದಕ್ಕೆ, ಅದರ ಪರಿಣಾಮವಾಗಿ ನಗರವನ್ನು ಸ್ವಚ್ಛವಾಗಿಡುವುದಕ್ಕೋಸ್ಕರ ಕಂಪೋಸ್ಟ ತಯಾರು ಮಾಡತಕ್ಕ ಯಂತ್ರಕ್ಕಾಗಿ ಸರ್ಕಾರ ೬೫ ಲಕ್ಷ ರೂಪಾಯಿಗಳನ್ನು ಕಾರ್ಪೋರೇಷನ್ನಿಗೆ ಸಾಲವಾಗಿ ಕೊಟ್ಟಿದೆ. ಈ ಕೆಲಸವನ್ನು ಏಕೆ ಕಾರ್ಯರೂಪಕ್ಕೆ ತಂದಿಲ್ಲ?

ಶ್ರೀ ಬಿ. ಬಸವಲಿಂಗಪ್ಪ.—ಕಾರ್ಯರೂಪಕ್ಕೆ ತರಲಿಲ್ಲವೆನ್ನುವ ಪ್ರಶ್ನೆಯಲ್ಲ. ಅದು ಸರಿಯಾಗಿ ಕೆಲಸ ಮಾಡುವುದಿಲ್ಲವೆಂದು ಕೆಲವು ಕಡೆ ಹೇಳುತ್ತಾರೆ ಕೆಲಸ ಮಾಡುತ್ತದೆ ಎಂದು ಕೆಲವು ಕಡೆ ಹೇಳುತ್ತಾರೆ. ಈ ವಿವಾದವಿದೆ. ಈ ಪ್ಲಾಂಟ್ ಯಾರು ಯಾರು ತಯಾರು ಮಾಡುತ್ತಾರೆ ಅಂಥ ಕಂಪನಿಗಳಿಗೆಲ್ಲ ಕಾರ್ಪೋರೇಷನ್ ಕಮೀಷನರ ಬರೆದಿದ್ದಾರೆ. ಅದು ಬಂದ ತಕ್ಷಣ ಯಾವುದರಿಂದ ಹೆಚ್ಚು ಅನುಕೂಲತೆಗಳಿವೆ ಎನ್ನುವುದನ್ನು ನೋಡಿ ಒಂದು ತೀರ್ಮಾನ ತೆಗೆದುಕೊಂಡು ಪ್ಲಾಟ ಹಾಕಬೇಕೆಂದು ಒತ್ತಾಯ ಮಾಡುತ್ತಿದ್ದೇವೆ. ಅವರು ಮಾಡದೆ ಹೋದರೆ ಎರಡು ಮೂರು ತಿಂಗಳಲ್ಲಿ ನಿರ್ಧಾರ ತೆಗೆದುಕೊಂಡು ಆ ಪ್ಲಾಂಟ ಹಾಕುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಂ. ನಾಗಣ್ಣ. — ಏರ್‌ಪೋರ್ಟಿನಿಂದ ಬರಬೇಕಾದರೆ ಸ್ವಾಗತ ಕಮಾನನ್ನೂ ಮತ್ತು ದೊಮ್ಮಲೂರಿನ ಬಳಿ ಒಂದು ಉದ್ಯಾನವನವನ್ನೂ ನಿರ್ಮಿಸಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅದಕ್ಕೆ ಕಾರ್ಪೋರೇಷನ್ ಪರಿಶೀಲಿಸುತ್ತಿದೆ ಎಂದು ಹೇಳಿದ್ದಾರೆ. ಮೈಸೂರು ರಾಜ್ಯದ ಎಲ್ಲ ಗಡಿಗಳಲ್ಲಿಯೂ ಸ್ವಾಗತ ಕಮಾನನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿರಾ? ಮದ್ರಾಸಿನಿಂದ ಬೆಂಗಳೂರಿಗೆ ಬರಬೇಕಾದರೆ ಗಡಿಯಲ್ಲಿದ್ದ ಸ್ವಾಗತ ಕಮಾನುಗಳು ಬಿದ್ದು ಹೋಗಿದ್ದು ಅದನ್ನು ಸರಿ ಮಾಡಿಸಿಲ್ಲ. ಎಲ್ಲ ಗಡಿಗಳಲ್ಲಿಯೂ ಕರ್ನಾಟಕ ರಾಜ್ಯದೊಳಗೆ ಬರತಕ್ಕವರಿಗೆ ಸ್ವಾಗತ ನೀಡುವ ಸ್ವಾಗತ ಕಮಾನು ಹಾಕುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಸದಸ್ಯರ ಸಲಹೆಯನ್ನು ಕಾರ್ಪೊರೇಷನ್ನಿಗೆ ನಾನು ತಿಳಿಸುತ್ತೇನೆ.

ಶ್ರೀ ಕೆ. ಶ್ರೀರಾಮುಲು.—೨೫ ಲಕ್ಷ ರೂಪಾಯಿಗಳಷ್ಟು ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದರಲ್ಲಿ ಸರ್ಕಾರದ ಮೂಲಕ ಖರ್ಚಾಗುವುದೆಷ್ಟು, ಕಾರ್ಪೊರೇಷನ್ನಿನಿಂದ ಖರ್ಚಾಗುವುದೆಷ್ಟು ಮತ್ತು ಟ್ರಸ್ಟ್ ಬೋರ್ಡಿನಿಂದ ಖರ್ಚಾಗುವುದೆಷ್ಟು ಎನ್ನುವ ವಿವರಗಳನ್ನು ಹೇಳುವುದಕ್ಕೆ ಸಾಧ್ಯವೇ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರು ಬೇರೆ ಪ್ರಶ್ನೆ ಕೇಳಿದರೆ ಉತ್ತರ ಕೊಡಬಹುದು.

ಎಂ. ಎಚ್. ಜಯಪ್ರಕಾಶ ನಾರಾಯಣ.—೬೫ ಲಕ್ಷ ರೂಪಾಯಿ ಯಂತ್ರದ ಉಪಯೋಗದ ಬಗ್ಗೆ ವಾದವಿವಾದ ಉಂಟಾದ ಪ್ರಯುಕ್ತ ಅದನ್ನು ಉಪಯೋಗಿಸಿಲ್ಲವೆಂದರೆ ಪ್ರತಿ ದಿವಸ ಒಂದು ಸಾವಿರ ಟನ್ ಕಂಪೋಸ್ಟ ಉತ್ಪತ್ತಿಯಾಗತಕ್ಕ ವ್ಯವಸ್ಥೆ ಕಾರ್ಪೊರೇಷನ್ನಿನಲ್ಲಿ ಇರುವುದರಿಂದ ಅಂಥ ಉಪಕರಣವನ್ನು ಉಪಯೋಗಿಸಿಕೊಳ್ಳತಕ್ಕದಕ್ಕೆ ಮಾರ್ಗ ಮಾಡುತ್ತೀರಾ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ.—ಕಂಪೋಸ್ಟ ಪ್ಲಾಂಟ್ ಹಾಕತಕ್ಕದ್ದು ನಿರ್ದಿಷ್ಟವಾದ ಕ್ರಮ ಎನ್ನುವುದನ್ನು ಸ್ಪಷ್ಟಪಡಿಸುತ್ತಿದ್ದೇನೆ. ಯಾವ ಪ್ಲಾಂಟ್ ತರಬೇಕು, ಯಾವುದು ಸೂಕ್ತವಾದುದು ಎನ್ನುವ ಬಗ್ಗೆ ಪರಿಶೀಲನೆ ಮಾಡುತ್ತಿದ್ದಾರೆ. ಕಂಪೋಸ್ಟ ಪ್ಲಾಂಟ್ ಹಾಕಬೇಕೇ, ಬಿಡಬೇಕೇ ಎನ್ನುವುದರ ಬಗ್ಗೆ ವಿವಾದವಿಲ್ಲ, ಅದು ನಿರ್ವಿವಾದವಾದುದು.

ಶ್ರೀ ಎಂ. ಎಸ್. ಕೃಷ್ಣನ್.—ಎಂ. ಎಲ್. ಎ. ಗಳು ಬರುವುದಕ್ಕೆ ಆಹ್ವಾನ ನೀಡಿದರು ಸಂತೋಷ. ಆದರೆ ಮಾನ್ಯ ಮಂತ್ರಿಗಳು ಹೋಗುವ ವಿಷಯ ನಮಗೆ ಗೊತ್ತಾಗುವುದಿಲ್ಲ. ಅದಕ್ಕೆ ಎಲ್ಲ ಎಂ. ಎಲ್. ಎ. ಗಳಿಗೂ ಮೊದಲೇ ಅದರ ಬಗ್ಗೆ ತಿಳುವಳಿಕೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಅದಕ್ಕಿಂತ ಮುಖ್ಯವಾದುದು ಎಂ. ಎಲ್. ಎ. ಗಳನ್ನು ಮತ್ತು ಆಯಾ ಕ್ಷೇತ್ರದ ಕಾರ್ಪೊರೇಷನ್ ಸದಸ್ಯರನ್ನೂ ಆಗಿಂದಾಗ್ಗೆ ಕರೆದು ನಗರದ ಅಭಿವೃದ್ಧಿ ಬಗ್ಗೆ ಮುಖ್ಯವಾಗಿ ಏನಾಗಿದೆ, ಏನಾಗಲ್ಲ ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಒಂದು ಅವಕಾಶವನ್ನು ಮಾಡಿ ಕೊಡುತ್ತಾರೆಯೇ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಈ ಬಗ್ಗೆ ಅವರನ್ನು ಕರೆದು ಚರ್ಚೆ ಮಾಡಿ ನಿರ್ಣಯ ತೆಗೆದುಕೊಳ್ಳತಕ್ಕದ್ದು ಅವರ ಗಮನಕ್ಕೆ ಬಂದಿದೆಯೆಂದು ಕಾಣುತ್ತದೆ. ಆ ಕೆಲಸ ಮಾಡುತ್ತಿದ್ದೇನೆ. ಅಭಿವೃದ್ಧಿ ಕಾರ್ಯದ ಬಗ್ಗೆ ಸ್ಥಳ ಪರಿಶೀಲನೆ ಮಾಡಬೇಕಾಗುತ್ತದೆ. ಅದಕ್ಕೆ ನನ್ನ ಜೊತೆಗೆ ಬರಬೇಕು. ಅದಕ್ಕೆ ನಾನು ಆಹ್ವಾನ ಕಳುಹಿಸುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ನಾನು ಕೇಳಿದ ಪ್ರಶ್ನೆಗಳಿಗೆ ಸಚಿವರು ಉತ್ತರ ಕೊಡುತ್ತ ಕಾರ್ಪೊರೇಷನ್ನಿಗೆ ತಿಳಿಸುವುದಾಗಿ ಹೇಳಿದರು. ನಾನು ಕಾರ್ಪೊರೇಷನ್ ಗಡಿಯಲ್ಲಿ ಸ್ವಾಗತ ಕಮಾನು ಹಾಕುವ ವಿಚಾರ ಕೇಳಲಿಲ್ಲ. ರಾಜ್ಯದ ಎಲ್ಲ ಗಡಿ ಗಳಲ್ಲಿಯೂ ಸ್ವಾಗತ ಕಮಾನು ಹಾಕುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೆ?

ಅಧ್ಯಕ್ಷರು.—ಮಾನ್ಯ ಸದಸ್ಯರು ಮೊದಲು ಪ್ರಶ್ನೆ ಕೇಳಿದಾಗ ಅದು ಮೂಲ ಪ್ರಶ್ನೆಗೆ ಸಂಬಂಧ ಪಡದೇ ಇದ್ದರೂ ಸುಮ್ಮನೆ ಇದ್ದೆ. ಕಾರ್ಪೊರೇಷನ್ನಿಗೆ ಸಂಬಂಧಪಟ್ಟ ಪ್ರಶ್ನೆ ಸಭೆಯ ಮುಂದೆ ಇರುವಾಗ ರಾಜ್ಯದ ಗಡಿಗಳಲ್ಲಿ ಸ್ವಾಗತ ಕಮಾನು ಹಾಕುವ ವಿಚಾರ ಇದರಲ್ಲಿ ಹೇಗೆ ಬರುತ್ತದೆ? ಬರುವದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈ ವಿಷಯ ಮಾನ್ಯ ರೆವನ್ಯೂ ಮಂತ್ರಿಗಳಿಗೆ ಸಂಬಂಧಪಟ್ಟದ್ದು.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ನನ್ನ ಕ್ಷೇತ್ರದ ಬಹಳ ಭಾಗ ದಲ್ಲಿ ಮಿಲಿಟರಿ ಬ್ಯಾರಕ್ಸ್ ಇವೆ. ಈ ಬಗ್ಗೆ ತೀವ್ರ ಗಮನ ತೆಗೆದುಕೊಂಡು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಆ ಜಾಗವನ್ನು ತೆಗೆದುಕೊಂಡು ಆ ಪ್ರದೇಶವನ್ನು ಅಭಿವೃದ್ಧಿ ಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ? ಕಿಷ್ಕಿಂಧಾ ಪಟ್ಟಣದ ಹಾಗೆ ಆ ಪ್ರದೇಶ ಇರುವುದರಿಂದ ಮಿಲಿಟರಿ ಬ್ಯಾರಕ್ಸ್ ತೆಗೆಯುವುದಕ್ಕೆ ಏನು ಕಾರ್ಯ ಕ್ರಮ ತೆಗೆದುಕೊಳ್ಳುತ್ತೀರಿ? ಯಾವ ಡಿಗ್ನಿಟರೀಸ್ ಬರಬೇಕಾದರೂ ನನ್ನ ಕ್ಷೇತ್ರದ ಮಾರ್ಗವಾಗಿಯೇ ಬರಬೇಕು. ಅವರು ಬರಬೇಕಾದರೆ ಸೊಳ್ಳೆ ಕಾಟ, ಕೊಳಚೆ ನೀರು, ಬಡವರ ಮನೆಗಳಿವೆ. ಆದಕಾರಣ ಡಿಗ್ನಿಟರೀಸ್ ಬರುವವರಿಗೆ ಸುಖಾ ಗಮನ ನೀಡುವುದಕ್ಕೆ ಅಚ್ಚುಕಟ್ಟಾದ ಆರ್ಚಸ್ ಹಾಕುವುದು ಆ ಪ್ರದೇಶವನ್ನು ಉತ್ತಮ ಪಡಿಸುವುದು ಇಂಥ ಕೆಲಸವನ್ನು ಜಾಗ್ರತೆ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಆರ್ಚಸ್ ಹಾಕಿದರೆ ಸೊಳ್ಳೆಗಳು ಓಡಿ ಹೋಗುತ್ತ ವೆಂದು ನಾನು ತಿಳಿದುಕೊಂಡಿಲ್ಲ. ಸೊಳ್ಳೆ ನಿರ್ಮೂಲನ ಮಾಡಲು ಸರ್ವ ಪ್ರಯತ್ನ ವನ್ನೂ ಮಾಡುತ್ತಿದ್ದೇವೆಂದು ಹೇಳುತ್ತೇನೆ. ಐದು ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ ದೊಡ್ಡ ಟೌನಷಿಪ್ ಕಟ್ಟಬೇಕೆಂದು ನಿರ್ಧರ ಮಾಡಿದ್ದೇವೆ. ಅದು ಮಾನ್ಯ ಸದಸ್ಯರಿಗೆ ಗೊತ್ತಿರಬಹುದು. ಇಷ್ಟೇ ಅಲ್ಲ, ಬಡವರಿರತಕ್ಕ ಪ್ರದೇಶವೇನಿದೆ ಅದೆಲ್ಲ ದರ ಕಡೆಗೂ ಅಭಿವೃದ್ಧಿ ಕಾರ್ಯಗಳನ್ನು ಮಾಡತಕ್ಕ ವಿಷಯದಲ್ಲಿ ಹೆಚ್ಚು ಹೆಚ್ಚು ಆಸಕ್ತಿ ವಹಿಸುತ್ತ ಇರುವುದು ಸಂತೋಷದ ವಿಷಯ. ನಾವು ಕೆಲಸ ಮಾಡಲಿಕ್ಕೆ ತಯಾರಿದ್ದೇವೆ.